ಕ್ರ.ಸಂ: ೦೬

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 384 ಎಲ್‌ಇಟಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 31.01.2017.

## ಅಧಿಸೂಚನೆ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ಮತ್ತು ಕರ್ನಾಟಕ ನಿಯಮಗಳು, 2006ರ ಪ್ರಾವದಾನಗಳಡಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಫಲಾನುಭವಿಗಳಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ. ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಲು ನಿರ್ಮಾಣ ಕಾಮಗಾರಿಗಳ ವೆಚ್ಚದ ಶೇ.1ರಷ್ಟು ಮೊತ್ತವನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996 ಮತ್ತು ಕೇಂದ್ರ ನಿಯಮಗಳು, 1998ರ ಪ್ರಾವದಾನಗಳಡಿ ಸುಂಕವನ್ನು ಸಂಗ್ರಹಿಸಿ ಮಂಡಳಿಯಲ್ಲಿ ಸುಂಕ ನಿಧಿಯನ್ನು ಸ್ಥಾಪಿಸಲಾಗಿರುತ್ತದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996ರ ಕಲಂ 12 (1)ರಡಿ ಕಳೆದ 12 ತಿಂಗಳಲ್ಲಿ ಕನಿಷ್ಠ 90 ದಿನ ಕಟ್ಟಡ ಅಥವಾ ಇತರೆ ನಿರ್ಮಾಣ ಕೆಲಸ ನಿರ್ವಹಿಸಿದ ಕಾರ್ಮಿಕರನ್ನು ಮಂಡಳಿಯಲ್ಲಿ ನೋಂದಾಯಿಸಲು ಪ್ರಾವದಾನಗಳಿರುತ್ತವೆ. ಈ ಕಾಯ್ದೆಯ ಕಲಂ 2(1)(d) ಅಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ–

**Section 2 (1)(d): "Building or other construction work"** means the construction, alteration, repairs, maintenance or demolition of, or in relation to, buildings, streets, roads, railways, tramways, airfields, irrigation, drainage, embankment and navigation works, flood control works (including storm water drainage works), generation, transmission and distribution of power, water works (including channels for distribution of water), oil and gas installations, electric lines, wireless, radio, television, telephone, telegraph and overseas communications, dams, canals, reservoirs, watercourses, tunnels, bridges, viaducts, aqueducts, pipelines, towers, cooling towers, transmission towers and such other work as may be specified in this behalf by the appropriate Government, by notification but does not include any building or other construction work to which the provisions of the Factories Act, 1948 (63 of 1948), or the Mines Act, 1952 (35 of 1952) apply;"

ಈ ಮೇಲಿನ ಕಾಮಗಾರಿಗಳಲ್ಲದೇ, ಇನ್ನೂ ಕೆಲವು ನಿರ್ಮಾಣ ಕಾಮಗಾರಿಗಳನ್ನು ಮೇಲಿನ ವ್ಯಾಖ್ಯಾನಕ್ಕೆ ತರಲು ಕರ್ನಾಟಕ ಸರ್ಕಾರವು ಸದರಿ ಕಲಂನ ಪ್ರಾವದಾನಗಳಡಿ ಇರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆ ಸಂಖ್ಯೆ: ಕಾಇ 220 ಎಲ್‌ಇಟಿ 2013 ದಿನಾಂಕ: 30–11–2013ರಂದು ಹೊರಡಿಸಿರುತ್ತದೆ. ಈ ಅಧಿಸೂಚನೆಯಲ್ಲಿ ಹೆಚ್ಚುವರಿಯಾಗಿ 21 ಇತರೆ ನಿರ್ಮಾಣ ಕೆಲಸಗಳನ್ನು ಕಾಯ್ದೆಯ ಕಲಂ 2(1)(d)ರ ಪ್ರಾವದಾನಗಳಡಿ ಸೇರಿಸಲಾಗಿರುತ್ತದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು, 2006ರ ನಿಯಮ 20(2)(c)ರಂತೆ ಅರ್ಜಿದಾರರು ನಿಗದಿತ ನಮೂನೆಯೊಂದಿಗೆ ಈ ಕೆಳಗಿನ ಪ್ರಮಾಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ-

**Rule 20(2)(c):** certificate from the present employer or a Trade union registered under the Trade Unions Act,1926, or an official of Labour Department in the concerned jurisdiction not below the rank of Labour Inspector or a certificate of employment issued by the Chairman /Secretary or their nominee of CREDAI (Confederation of Real Estate Developers Association of India), or BAI (Builders Association of India) or the Karnataka State Contractors Association;

ಮುಂದುವರೆದು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996ರ ಕಲಂ 2(1)(i)ರಲ್ಲಿ "ನಿಯೋಜಕರ (Employer)" ವ್ಯಾಖ್ಯಾನವನ್ನು ಈ ಕೆಳಗಿನಂತೆ ಪರಿಭಾಷಿಸಲಾಗಿದೆ-

**Section 2(1)(i): "Employer",** in relation to an establishment, means the owner thereof, and includes,-

(i) in relation to a building or other construction work carried on by or under the authority of any department of the Government, directly without any contractor, the authority specified in this behalf, or where no authority is specified, the head of the department;

(ii) in relation to a building or other construction work carried on by or on behalf of a local authority or other establishment, directly without any contractor, the chief executive officer of that authority or establishment;

(iii) in relation to a building or other construction work carried on by or through a contractor, or by the employment of building workers supplied by a contractor, the contractor;

ಕೇಂದ್ರ ಸರ್ಕಾರದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳು ಹಾಗು ಸರ್ಕಾರದ ಕೆಲವು ಇಲಾಖೆಗಳು ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಅಂತಹ ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರುವ ನಿರ್ದಿಷ್ಟ ಪ್ರಾಧಿಕಾರಗಳು ಸಹ ಈ ಕಾಯ್ದೆಯ ಕಲಂ 2(1)(i)ರನ್ವಯ "ನಿಯೋಜಕರ (Employer)" ವ್ಯಾಪ್ತಿಗೆ ಒಳಪಡುತ್ತಾರೆ ಹಾಗು ಸಂಬಂಧಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕಾಯ್ದೆಯಡಿ ನಿಗದಿತ ನಿಯೋಜಕರ ಪ್ರಮಾಣ ಪತ್ರ ನೀಡಲು ಅರ್ಹರಾಗುತ್ತಾರೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಈ ಕಾಯ್ದೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಲು ಕೇಂದ್ರ ಸರ್ಕಾರವು ದಿನಾಂಕ: 15-09-2014ರ ಪತ್ರದಲ್ಲಿ ಈ ಕೆಳಗಿನಂತೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿರುತ್ತದೆ-

"......4.

(i) the State should carry out special drive for registration of workers under the BOCW (RECS) Act, 1996 allowing registration of such workers who have completed 50 days of work in a year under MGNREGA and other construction workers who have completed 90 days of work on the basis of simplified process like self-certification by the workers or certificate by Panchayat etc.;

(ii) State Government/State Welfare Board should authorize all Gram Panchayats, Municipalities and Assistant/Junior Engineer of various engineering department like PWD, irrigation, water supply etc. to register workers under BOCW Act.

......"

ಕೇಂದ್ರ ಸರ್ಕಾರದ ಮೇಲಿನ ಸೂಚನೆಗಳನ್ನು ಕರ್ನಾಟಕ ಸರ್ಕಾರವು ಪರಿಶೀಲಿಸಿದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಟ್ಟಡ ಅಥವಾ ಇತರೆ ನಿರ್ಮಾಣ ಕೆಲಸ ನಿರ್ವಹಿಸಿರುವ ಕಾರ್ಮಿಕರನ್ನು ಈ ಕಾಯ್ದೆಯಡಿ ನೋಂದಾಯಿಸಲು ಈಗಾಗಲೇ ಅವಕಾಶವಿರುತ್ತದೆ. ಅದರಂತೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ರ ಕಲಂ 2(1)(i)ರ ಪ್ರಾವಧಾನದಡಿಯಲ್ಲಿ ಕಟ್ಟಡ ಅಥವಾ ಇತರೆ ನಿರ್ಮಾಣ ಕಾರ್ಮಿಕರು ನೋಂದಣಿ ಹೊಂದಲು ಕಳೆದ 12 ತಿಂಗಳಲ್ಲಿ ನಿಗದಿತ ಕನಿಷ್ಠ 90 ದಿನಗಳ ಪೈಕಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನಿರ್ಮಾಣ ಕಾರ್ಯದಲ್ಲಿ ಭಾಗಶ: ಅಥವಾ ಪೂರ್ಣ ಪ್ರಮಾಣದಲ್ಲಿ ತೊಡಗಿರಬೇಕು. ಅಂತಹ ಸಂದರ್ಭಗಳಲ್ಲಿ ಸಂಬಂಧಿತ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು, 2006ರ ನಿಯಮ 20(2)(c)ರಲ್ಲಿ "ನಿಯೋಜಕರಾಗಿ (Employer)" ಪ್ರಮಾಣ ಪತ್ರ ನೀಡಲು ಈ ಮೂಲಕ ಅಧಿಕಾರ ನೀಡಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನಿರ್ಮಾಣ ಕಾರ್ಯದಲ್ಲಿ ತೊಡಗಿದ ದಿನಗಳು ಹಾಗು ಇತರೆ ನಿಯೋಜಕರ ಬಳಿ ನಿರ್ಮಾಣ ಕಾರ್ಯಗಳಲ್ಲಿ ತೊಡಗಿದ ದಿನಗಳು ಸೇರಿ ಕಳೆದ 12 ತಿಂಗಳಲ್ಲಿ ನಿಗದಿತ ಕನಿಷ್ಠ 90 ದಿನಗಳು ಕಾರ್ಯನಿರ್ವಹಿಸಿದ ಸಂದರ್ಭಗಳಲ್ಲಿ ಕಾರ್ಮಿಕರು ಈ ಕೆಳಗಿನಂತೆ ಪ್ರಮಾಣ ಪತ್ರ ಪಡೆದು ಕಾಯ್ದೆಯಡಿ ನೋಂದಾಯಿಸಿಕೊಳ್ಳಬಹುದಾಗಿದೆ.-

(i) ನಿಗಧಿತ ಕನಿಷ್ಠ 90 ದಿನಗಳ ಪೈಕಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಟ್ಟಡ ಅಥವಾ ಇತರೆ ನಿರ್ಮಾಣ ಕೆಲಸ ನಿರ್ವಹಿಸಿದ ಅವಧಿಗೆ ಸಂಬಂಧಿತ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗು ಗ್ರಾಮ ಪಂಚಾಯತ್ ಕಾರ್ಯದರ್ಶಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು, 2006ರ ನಿಯಮ 20(2)(c)ರಡಿ ನಿಯೋಜಕರಾಗಿ ಅನುಬಂಧ-1ರ ನಿಗದಿತ Form-V(A)ರಲ್ಲಿ ಉದ್ಯೋಗ ಪ್ರಮಾಣ ಪತ್ರ ನೀಡುವುದು.

(ii) ಉಳಿದ ಅವಧಿಯಲ್ಲಿ ಕಾರ್ಮಿಕರು ಇತರೆ ನಿಯೋಜಕರಲ್ಲಿ (Employer) ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿದ ಅವಧಿಗೆ ಕರ್ನಾಟಕ ನಿಯಮಗಳು, 2006ರ ನಿಯಮ 20(2)(c)ರಲ್ಲಿ ನಿಗದಿತ ಪ್ರಾಧಿಕಾರಗಳಿಂದ ಅನುಬಂಧ-1ರ Form-V(A) - ಉದ್ಯೋಗ ಪ್ರಮಾಣ ಪತ್ರ ಪಡೆಯುವುದು.

ಈಗಾಗಲೇ ಸರ್ಕಾರವು ಅಧಿಸೂಚನೆ ಸಂಖ್ಯೆ: ಕಾಇ 358 ಎಲ್‌ಇಟಿ 2009, ದಿನಾಂಕ: 06-11-2009ರ ಮೂಲಕ ಅಧಿಸೂಚನೆ ಹೊರಡಿಸಿ, ನೇಮಕ ಮಾಡಿರುವ ಪ್ರಾಧಿಕಾರಿಗಳ ಬಳಿ ಕಾರ್ಮಿಕರು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕಟ್ಟಡ ಅಥವಾ ಇತರೆ ನಿರ್ಮಾಣ ಕಾಮಗಾರಿಗಳನ್ನು ಹೊರತುಪಡಿಸಿ ಇತರೆ ಕಾಮಗಾರಿಗಳಾದ ಕೃಷಿ, ಅರಣ್ಯ, ತೋಟಗಾರಿಕೆ, ಮೀನುಗಾರಿಕೆ ಮುಂತಾದ ಕಾಮಗಾರಿಗಳಲ್ಲಿ ತೊಡಗಿರುವ ದಿನಗಳನ್ನು ಕಾಯ್ದೆಯಡಿ ನಿಗದಿಪಡಿಸಿರುವ ಕನಿಷ್ಠ 90 ದಿನಗಳ ಅವಧಿಗೆ ಸೇರಿಸಲು ಅವಕಾಶವಿರುವುದಿಲ್ಲವೆಂದು ದೃಢೀಕರಣ ಅಧಿಕಾರಿಗಳಿಗೆ ಈ ಮೂಲಕ ಸ್ಪಷ್ಟಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

31.01.2017

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

ಇವರಿಗೆ:

ಸಂಕಲನಾಧಿಕಾರಿ, ಕರ್ನಾಟಕ ರಾಜ್ಯಪತ್ರ, ಬೆಂಗಳೂರು. – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರಿಗೆ ಹಾಗೂ 500 ಪ್ರತಿಗಳನ್ನು ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ ಇವರಿಗೆ ಕಳುಹಿಸಲು ಕೋರಿದೆ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
5. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪರಿಷತ್.
6. ಕಾರ್ಯದರ್ಶಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.
7. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.